ಸಾಧ್ಯವಾದರೆ ರೆಸ್ಟ್ ಹೌಸ್ ಕೊಡಬೇಕೆಂದರೆ ಮಾಡಿಸೋಣ.

ಶ್ರೀ ಹೆಚ್.ಸಿ.ಬಸವರಾಜ್: ಅಲ್ಲಿ ವೀಡ್ಸ್ ಬಹಳ ಇದೆ, ನೀರು ಎಲ್ಲಾ ಕಾಲದಲ್ಲೂ ಇರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಅಲ್ಲಿ ನೀರು 365 ದಿವಸ ಪೆರಿನಿಯಲ್ ಸೋರ್ಸ್ ಇರತಕ್ಕಂಥ ಒಂದು ಕೆರೆ. ಆ ಕೆರೆ ಮೈನರ್ ಇರಿಗೇಷನ್‌ನಿಂದ ಡೆವಲಪ್ ಆಗಿರತಕ್ಕಂಥ ಕೆರೆ. ನೂರಾರು ಎಕರೆಗೆ ನೀರು ಕೊಡುತ್ತದೆ. ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಆ ಸ್ಥಳವು ಬಹಳ ಯೋಗ್ಯವಾಗಿದೆ. ಸರ್ಕಾರ ಇದನ್ನು ಪರಿಶೀಲಿಸಿ ನೋಡಿ ಮಾಡುವುದಾದರೆ ಬಹಳ ಸಂತೋಷ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದನ್ನ ಪ್ರವಾಸೋದ್ಯಮ ಕೇಂದ್ರವನ್ನಾಗಿ ಕೊಡಬೇಕು ಹಾಗೂ ಎಷ್ಟು ದಿವಸದಲ್ಲಿ ಬಂದು ನೋಡಿ ಈ ಕೆಲಸವನ್ನು ಹಮ್ಮಿಕೊಳ್ಳುತ್ತೀರೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅಲ್ಲಿ 365 ದಿವಸ ನೀರಿರುತ್ತದೆ, ಆದರಿಂದ ಬೋಟಿಂಗ್ ಫೆಸಿಲಿಟೀಸ್ ಮಾಡಬಹುದೆಂದು ಹೇಳಿದ್ದಾರೆ. ಸರ್ಕಾರದ ವತಿಯಿಂದ ಟೂರಿಸಂ ಡಿಪಾರ್ಟ್‌ಮೆಂಟ್‌ನಿಂದ ಮೈನರ್ ಇರಿಗೇಷನ್ ಇಲಾಖೆಯವರ ಜೊತೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಒಳ್ಳೆ ಕೆರೆ ಇದೆ For the benefit of middle class. ಅಲ್ಲೆಲ್ಲಾ ಬೋಟಿಂಗ್ ಫೆಸಿಲಿಟೀಸ್ ಮಾಡಬೇಕೆಂದು ಒಂದು ಸ್ಕೀಂ ಮಾಡಿಕೊಂಡಿದ್ದೇವೆ. ಈ ಅಧಿವೇಶನವಾದ ಮೇಲೆ ನಾನೇ ಸ್ವತಃ ಮಾನ್ಯ ಸದಸ್ಯರ ಜೊತೆ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಅದನ್ನು ಹಾಕಿಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

11.40 ಎ.ಎಂ

ಅಧ್ಯಕ್ಷರು: ಶ್ರೀ ಸುರೇಶ್ ಕುಮಾರ್ ಅವರ 3007ನೇ ಪ್ರಶ್ನೆಯನ್ನು ಕಾನೂನು ಇಲಾಖೆಗೆ ವರ್ಗಾಯಿಸಿದ್ದಾರೆ. ಈ ಪ್ರಶ್ನೆಯನ್ನು ಮುಂದಿನ ಸೋಮವಾರ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎಸ್.ಸುರೇಶ್ ಕುಮಾರ್: ಆಯಿತು. ದಯಮಾಡಿ ಮುಂದಿನ ಸೋಮವಾರ ಸರ್ಕಾರದಿಂದ ಉತ್ತರವನ್ನು ಕೊಡಿಸಿಕೊಡಬೇಕು.

ಸಕಲೇಶಪುರ ಹಾಗೂ ಆಲೂರು ತಾಲ್ಲೂಕಿನಲ್ಲಿರುವ ಕೆಟ್ಟ ರಸ್ತೆಗಳ ಸುಧಾರಣೆ

(279) 2690

ಶ್ರೀ ಶಿವಪ್ಪ ಬಿ.ಬಿ.(ಸಕೇಲೇಶಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) 1998-99ನೇ ಸಾಲಿನಿಂದ ಇದುವರೆವಿಗೂ ಈ ರಸ್ತೆಗಳ ನಿರ್ವಹಣೆಗೆ ಖರ್ಚಾದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹಲವೆಡೆ ರಸ್ತೆಗಳ ಸುಧಾರಣೆ ಅವಶ್ಯವಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಗುಂಡಿ ಮುಚ್ಚುವ ಕೆಲಸವನ್ನು ಮಾಡಲಾಗಿದೆ. 75.00 ಕೋಟಿ ರೂ.ಗಳ ಕಾರ್ಯಕ್ರಮದಡಿಯಲ್ಲಿ ರಸ್ತೆ ಸುಧಾರಣೆಗೋಸ್ಕರ 40.00 ಲಕ್ಷ ರೂ.ಗಳ ಎರಡು ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ. ಮತ್ತು 1999-2000 ಸಾಲಿನಲ್ಲೂ ಕೂಡ ಪ್ರಕೃತಿ ವಿಕೋಪ ಪರಿಹಾರ ನಿಧಿ ಕಾರ್ಯಕ್ರಮದಲ್ಲಿ 13.00 ಲಕ್ಷ ರೂ.ಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಆಲೂರು ತಾಲ್ಲೂಕಿಗೆ 3.00 ಲಕ್ಷ ರೂ. ಮತ್ತು ಸಕಲೇಶಪುರ ತಾಲ್ಲೂಕಿಗೆ 10.00 ಲಕ್ಷ ರೂ.ಗಳ ಕಾಮಗಾರಿಗಳು, ಅನುಮೋದನೆಯಾಗಿರುತ್ತವೆ.

ಆ) 1998-99ನೇ ಸಾಲಿನಲ್ಲಿ 69.48 ಲಕ್ಷ ರೂ.ಗಳು ಮತ್ತು 1999-2000ನೇ ಸಾಲಿನಲ್ಲಿ 34.30 ಲಕ್ಷ ರೂ.ಗಳನ್ನು ರಸ್ತೆಗಳ ನಿರ್ವಹಣೆಗೆ ಖರ್ಚು ಮಾಡಲಾಗಿದೆ. ಒಟ್ಟು 103.78 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೆ, 1998-99ನೇ ಸಾಲಿನಿಂದ ಇದುವರೆವಿಗೂ ಒಟ್ಟು 103.78 ಲಕ್ಷ ರೂಪಾಯಿಗಳನ್ನು ರಸ್ತೆಗಳ ನಿರ್ವಹಣೆಗೆ ಖರ್ಚು ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ದಯವಿಟ್ಟು ಅದರ ವಿವರಗಳನ್ನು ಇಲ್ಲಿ ಕೊಡಬೇಕು, ಅದು ಸಾಧ್ಯವಾಗದಿದ್ದರೆ ನನಗೆ ಕಳುಹಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ನಂತರ ರಸ್ತೆ ಸುಧಾರಣೆಗೋಸ್ಕರ ಟೆಂಡರ್ ಕರೆಯಲಾಗಿದೆ ಮತ್ತು 1999-2000 ಸಾಲಿನಲ್ಲೂ ಕೂಡ ಪ್ರಕೃತಿ ವಿಕೋಪ ಪರಿಹಾರ ನಿಧಿ ಕಾರ್ಯಕ್ರಮದಲ್ಲಿ 13 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಆಲೂರು ತಾಲ್ಲೂಕಿಗೆ 3.00 ಲಕ್ಷ ರೂಪಾಯಿಗಳು ಮತ್ತು ಸಕಲೇಶಪುರ ತಾಲ್ಲೂಕಿಗೆ 10.00 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಅನುಮೋದನೆಯಾಗಿರುತ್ತದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ದಯವಿಟ್ಟು ಅದರ

ವಿವರಗಳನ್ನು ಸಹ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಸಕಲೇಶಪುರ ತಾಲ್ಲೂಕಿನಲ್ಲಿ 47 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ಬರುತ್ತದೆ, 25.20 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಬರುತ್ತದೆ ಮತ್ತು 212 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆ ಬರುತ್ತದೆ. ಆಲೂರು ತಾಲ್ಲೂಕಿನಲ್ಲಿ 14 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ, ಇಲ್ಲಿ ರಾಜ್ಯ ಹೆದ್ದಾರಿ ಬರುವುದಿಲ್ಲ ಮತ್ತು 65;50 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆ ಹಾದು ಹೋಗುತ್ತದೆ. ಇದಕ್ಕೆ ನಾವು 1998-99ರಲ್ಲಿ 69.48 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1999-2000ನೇ ಇಸವಿಯಲ್ಲಿ 34 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗಾಗಲೇ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ರಸ್ತೆಗಳ ನಿರ್ವಹಣೆಗಾಗಿ ಒಟ್ಟು ಒಂದು ಕೋಟಿ 3ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಪ್ರಕೃತಿ ವಿಕೋಪ ಪರಿಹಾರನಿಧಿ ಅಡಿಯಲ್ಲಿ ಕೂಡ ರಸ್ತೆ ಸುಧಾರಣೆಗೋಸ್ಕರ 40ಲಕ್ಷ ರೂಪಾಯಿಗಳ ಎರಡು ಕೆಲಸಗಳಿಗೆ ಟೆಂಡರ್ ಕರೆದು ಅದನ್ನು ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಹಾಳಾಗಿರುವ ರಸ್ತೆಗಳನ್ನು ಸರಿಪಡಿಸುವುದಕ್ಕೆ 75ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇಟ್ಟಿದ್ದು ಅದರಲ್ಲಿ ಸಕಲೇಶಪುರಕ್ಕೆ ಕೂಡ ಹಣವನ್ನು ಒದಗಿಸಿ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಟೆಂಡರ್‌ನ್ನು ಕರೆದು ಈಗ ಕೆಲಸ ಪ್ರಗತಿಯಲ್ಲಿದೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಸಾಧ್ಯವಾದರೆ ಆ ರಸ್ತೆಗಳ ವಿವರವನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಕಳುಹಿಸಿಕೊಡಬೇಕು. ಇನ್ನು ಒಟ್ಟು ಒಂದು ಕೋಟಿ 43 ಲಕ್ಷ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೇವೆಂದು ಹೇಳಿದಿರಿ ಇದರ ಪೂರ್ಣ ವಿವರಣೆಯನ್ನು ಕೊಟ್ಟರೆ ಸ್ವಲ್ಪ ಒಳ್ಳೆಯದಾಗುತ್ತದೆ. ಸಕಲೇಶಪುರದಿಂದ ಕೇರಳಕ್ಕೆ ಹೋಗುವಂಥ ರಾಜ್ಯ ಹೆದ್ದಾರಿ ಒಟ್ಟಾರೆ 30 ರಿಂದ 40 ಕಿ.ಮೀ ರಸ್ತೆ ಇದೆ. ಆ ರಸ್ತೆಯ ಅಗಲ ಬಹಳ ಕಡಿಮೆ ಇದೆ. ಸಣ್ಣ ಕಾರುಗಳೂ ಸಹ ಆ ರಸ್ತೆಯಲ್ಲಿ ಹೋದರೆ ಎದುರುಗಡೆಯಿಂದ ಬರತಕ್ಕಂಥ ವಾಹನಗಳಿಗೆ ಸೈಡ್ ಕೊಡಲಿಕ್ಕೆ ಆಗುವುದಿಲ್ಲ. ರಾಜ್ಯ ಹೆದ್ದಾರಿ ಎಷ್ಟು ಅಗಲ ಇರಬೇಕೋ ಅಷ್ಟು ಅಗಲ ಇರುವುದಿಲ್ಲ. ಆದ್ದರಿಂದ ರಸ್ತೆಯ ಇಕ್ಕೆಗಳಲ್ಲೂ ಸ್ವಲ್ಪ ಅಗಲ ಮಾಡತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಆದ್ದರಿಂದ ಈ ರಸ್ತೆಯನ್ನು ಅಗಲ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ರಾಜ್ಯದ ಹೆದ್ದಾರಿಯನ್ನು ಅಗಲಗೊಳಿಸುವಿಕೆ ಕುರಿತು ತೀವ್ರಗತಿಯಿಂದ ತೀವ್ರವಾದಂಥ ಕಾರ್ಯಕ್ರಮವನ್ನು ಸರ್ಕಾರದ ಕಡೆಯಿಂದ ಹಮ್ಮಿಕೊಳ್ಳಲಾಗಿದೆ. ಆಲೂರು ತಾಲ್ಲೂಕಿನಲ್ಲಿ ಕಟ್ಟಹಳ್ಳಿ ಬೇಲೂರು ರಸ್ತೆ ಜೊತೆಗೆ

ಇನ್ನೂ ಬೇರೆ ರಸ್ತೆಗಳನ್ನು ಸೇರಿಸುತ್ತೇವೆ. ತಾವು ಕೇಳಿದ ವಿವರವನ್ನು ತಮಗೆ ಕಳುಹಿಸಿ ಕೊಡಲಾಗುವುದು. ಬೇರೆ ಎಲ್ಲಿ ರಸ್ತೆಯನ್ನು ಅಗಲಮಾಡತಕ್ಕಂಥಾದ್ದು ಇದೆ ಅದನ್ನು ಕೂಡ ಮಾಡುವುದಕ್ಕೆ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಹೆಚ್.ಸಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ರಸ್ತೆಗಳು ಕೆಟ್ಟರುವುದು ಸಕಲೇಶಪುರ, ಆಲೂರು ತಾಲ್ಲೂಕುಗಳಲ್ಲಿ ಮಾತ್ರ ಅಲ್ಲ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕೂಡ ರಸ್ತೆಗಳಲ್ಲಿ ಬಹಳಷ್ಟು ಗುಂಡಿ ಬಿದ್ದುಬಿಟ್ಟಿದೆ. ಮಾನ್ಯ ಸಚಿವರು 75 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಮಾನ್ಯ ಬಸವರಾಜ್ ಅವರೇ, ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೀವು ಪಿರಿಯಾಪಟ್ಟಣದ ಬಗ್ಗೆ ಕೇಳುತ್ತೀರಿ. ಇನ್ನೊಬ್ಬರು ಇನ್ನೊಂದು ಕಡೆಯ ವಿಚಾರವನ್ನು ಕೇಳುತ್ತಾರೆ. ಆದ್ದರಿಂದ ಶ್ರೀ ಶಿವಪ್ಪನವರು ಸ್ಪೆಸಿಫಿಕ್ ಆಗಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳ ರಸ್ತೆಗಳ ಬಗ್ಗೆ ಕೇಳಿದ್ದಾರೆ. ಸಕಲೇಶಪುರ, ಆಲೂರು ತಾಲ್ಲೂಕಿನ ಸಮಸ್ಯೆ ಬೇರೆ ಏನಾದರೂ ಇದ್ದರೆ ನೀವು ಕೇಳಿ. ಅದು ಬಿಟ್ಟು ನೀವು ಜನರಲ್ ಆಗಿ ಕೇಳಬೇಡಿ.

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ಅಲ್ಲಿರತಕ್ಕಂಥ ಪ್ರಾಕ್ಟಿಕಲ್ ಡಿಫಿಕಲ್ಟೀಸ್‌ನ್ನು ಹೇಳುತ್ತಿದ್ದೇನೆ. ಏನಾಗಿದೆಯೆಂದರೆ ರಸ್ತೆಗಳ ಗುಂಡಿಗಳನ್ನು ಮುಚ್ಚುವ ಕೆಲಸಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿದೆ. ರಸ್ತೆಗಳನ್ನು ಸರಿಪಡಿಸಬೇಕು ಎನ್ನುವ ಕಾಳಜಿ ಸಹ ಸರ್ಕಾರಕ್ಕಿದೆ. ಆದರೆ ಟಾರ್‌ಡ್ರಮಗಳು ಸಿಗದಿರುವುದರಿಂದ ಈಗ ಪ್ರೈವೇಟ್ ಆಗಿ ಟಾರ್ ಪರ್‌ಚೇಸ್ ಮಾಡಿ ಎಂದು ಹೇಳುತ್ತಿದ್ದಾರೆ. ಒಂದು ಟಾರ್ - ಡ್ರಮ್‌ಗೆ 2500 ರೂಪಾಯಿಗಳು ಆಗುತ್ತದೆ. ಸರ್ಕಾರದಿಂದ ಒಂದು ಟಾರ್‌ಡ್ರಮ್‌ಗೆ 1800-00 ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಟಾರ್‌ಡ್ರಮ್‌ಗಳನ್ನು ಕೊಟ್ಟರೆ ರಸ್ತೆಗಳ ಕೆಲಸ ಮಾಡಿಸಬಹುದು ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲವೆಂದು ಅಲ್ಲಿ ಗುತ್ತಿಗೆದಾರರು ಯಾರೂ ಸಹ ಮುಂದೆ ಬರುತ್ತಿಲ್ಲ. ಇದು ಅಲ್ಲಿರತಕ್ಕಂಥ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಆಗಿದೆ. ಹೀಗಾಗಿ ಅಲ್ಲಿ ಬಹಳಷ್ಟು ರಸ್ತೆಗಳಲ್ಲಿ ಗುಂಡಿ ಬಿದ್ದುಹೋಗಿದೆ. ಆದ್ದರಿಂದ ರಸ್ತೆಗಳ ಗುಂಡಿ ಮುಚ್ಚಲಿಕ್ಕೋಸ್ಕರ ಟಾರ್‌ನ್ನು ಶೀಘ್ರವಾಗಿ ಸಂಬಂಧಪಟ್ಟಂಥ ತಾಲ್ಲೂಕುಗಳಿಗೆ ಕೊಡುವುದಕ್ಕೆ ನಿರ್ದೇಶನ ನೀಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಸಕಲೇಶಪುರ ಹಾಗೂ ಆಲೂರಿಗೆ ಸಂಬಂಧ ಪಟ್ಟ ಹಾಗೆ ಮಾನ್ಯ ಹಿರಿಯ ಸದಸ್ಯರಾದ ಶಿವಪ್ಪನವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಶ್ರೀ ಬಸವರಾಜು ಅವರು ಪಿರಿಯಾಪಟ್ಟಣದಲ್ಲಿ ರಸ್ತೆಗಳ ಗುಂಡಿಗಳನ್ನು ಸರಿಪಡಿಸುವುದಕ್ಕೆ ಡಾಂಬರ್ ಸಿಗುತ್ತಿಲ್ಲವೆಂದು ಕೇಳಿದ್ದಾರೆ. ಮುಂದೆ ಇದರ ಬಗ್ಗೆ ಸ್ಪೆಸಿಫಿಕ್ ಆದ ಪ್ರಶ್ನೆಯನ್ನು ಕೇಳಿದರೆ ನಾನು ಅದಕ್ಕೆ ಉತ್ತರ

ಕೊಡುತ್ತೇನೆ.

ಆಡಳಿತದಲ್ಲಿ ಕನ್ನಡ ಭಾಷೆ ಜಾರಿ

(280) 2704

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್(ಚಾಮರಾಜ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾರಂಭವಾದದ್ದು ಎಂದಿನಿಂದ; ಇದುವರೆಗೆ ಯಾರು ಯಾರು ಈ ಇಲಾಖೆಯ ಸಚಿವರಾಗಿದ್ದರು?

ಆ) ಆಡಳಿತದಲ್ಲಿ ಕನ್ನಡ ಜಾರಿಗೊಳಿಸುವ ಬಗ್ಗೆ ಇಲಾಖೆ ಪ್ರಾರಂಭಗೊಂಡಾಗಿನಿಂದ ಕೈಗೊಂಡ ಕ್ರಮಗಳೇನು? ಕನ್ನಡ ಜಾರಿಗೊಳಿಸುವ ಬಗ್ಗೆ ಇದುವರೆವಿಗೆ ಎಷ್ಟು ಸುತ್ತೋಲೆಗಳನ್ನು ಎಂದೆಂದು ಹೊರಡಿಸಲಾಗಿದೆ?

ಇ) ಈ ಸುತ್ತೋಲೆಗಳಂತೆ ಕಾರ್ಯ ನಿರ್ವಹಿಸದ ಅಧಿಕಾರಿಗಳು ಯಾರು ಯಾರು ಇವರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಸರ್ಕಾರ ಆಡಳಿತದಲ್ಲಿ ಸಂಪೂರ್ಣ ಕನ್ನಡ ಜಾರಿ ಕುರಿತು ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) 1) ದಿನಾಂಕ 31-8-1977 ರಿಂದ ಪ್ರಾರಂಭವಾಗಿದೆ.

2) ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ವಿವರ:

1. ಶ್ರೀ ಕೆ.ಹೆಚ್.ಶ್ರೀನಿವಾಸ್
2. ಶ್ರೀ ಆರ್.ಗುಂಡೂರಾವ್
3. ಡಾ: ಜೀವರಾಜ ಆಳ್ವ
4. ಶ್ರೀ ಎಂ.ಪಿ.ಪ್ರಕಾಶ್
5. ಶ್ರೀ ಕೆ.ಹೆಚ್.ರಂಗನಾಥ್